# ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಸ್ತ್ರೀವಾದಿ ಸಂವೇದನೆ

**ಶೋಭಾ ಎಂ. ದೊಡ್ಡನಾಗಳ್ಳಿ**

ಕನ್ನಡ ವಿಭಾಗದ ಮುಖ್ಯಸ್ಥರು, ಕೆ.ಎಲ್.ಇ. ಸಂಸ್ಥೆಯ ರಾಜ ರಾಜೇಶ್ವರಿ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯ, ರಾಣೇಬೆನ್ನೂರು.

**DOI: https://doi.org/10.5281/zenodo.18700938**

## ABSTRACT:

ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಸ್ತ್ರೀವಾದಿ ಸಂವೇದನೆಯು ಕಾಲ ಕಾಲಕ್ಕೆ ಸಮಾಜದ ಚಲನೆ, ಮೌಲ್ಯಗಳ ಬದಲಾವಣೆ ಹಾಗೂ ಮಾನವ ಸಂವೇದನೆಗಳ ಪ್ರತಿಬಿಂಬವಾಗಿ ಬಂದಿದೆ. ನವ್ಯ, ನವೋದಯ, ದಲಿತ ಬಂಡಾಯ, ಪ್ರಗತಿಶೀಲ ಈ ಸಾಹಿತ್ಯ ಪ್ರಕಾರಗಳ ಮೂಲಕ ಆಧುನಿಕ ಚಳುವಳಿಗಳ ನಂತರ ಕನ್ನಡ ಸಾಹಿತ್ಯವು ಪ್ರವೇಶಿಸಿದ ಹೊಸ ಹಂತವೇ ಆಧುನಿಕೋತ್ತರ ಸಾಹಿತ್ಯ. ಈ ಹಂತದಲ್ಲಿ ಕಂಡು ಬರುವ ಪ್ರಮುಖ ಲಕ್ಷಣಗಳಲ್ಲಿ ಒಂದೇ ಸ್ತ್ರೀವಾದಿ ಸಂವೇದನೆ. ಆಧುನಿಕತೆಯುಕ್ತವಾದ ಪ್ರಗತಿ ಮತ್ತು ವೈಜ್ಞಾನಿಕ ದೃಷ್ಟಿಕೋನವನ್ನು ಕೇಂದ್ರವಾಗಿಟ್ಟುಕೊಂಡಿದ್ದಾರೆ. ಆಧುನಿಕೋತ್ತರತೆ ಆ ಮೌಲ್ಯಗಳ ಮೇಲೆಯೇ ಪ್ರಶ್ನೆಗಳನ್ನು ಎತ್ತುತ್ತದೆ. ಸತ್ಯ ಒಂದೇ ಅಲ್ಲ ಅನೇಕ ಸತ್ಯಗಳಿವೆ ಎಂಬ ಭಾವನೆ, ಕೇಂದ್ರವಿಲ್ಲದ ಬದುಕು, ಚೂರಾದ ಅನುಭವಗಳು ಇವು ಆಧುನಿಕೋತ್ತರ ಚಿಂತನೆಯ ಲಕ್ಷಣಗಳು. ಸ್ತ್ರೀವಾದಿ ಸಂವೇದನೆ ಎಂದರೆ ಸಂಪತ್ತು, ಉಪಭೋಗ, ಸೌಕರ್ಯ, ಬ್ರಾಂಡ್, ಅಧಿಕಾರ ಮತ್ತು ವೈಯಕ್ತಿಕ ಲಾಭಗಳನ್ನು ಜೀವನದ ಕೇಂದ್ರವಾಗಿಸಿಕೊಂಡ ಮನೋಭಾವ. ಮಾನವ ಸಂಬಂಧಗಳಿಗಿಂತ ಮೌಲ್ಯಗಳಿಗಿಂತ ವಸ್ತುಗಳಿಗೆ ಮಾರುಕಟ್ಟೆಗೆ ಹೆಚ್ಚಿನ ಮಹತ್ವ ನೀಡುವುದು ಇದರ ಮೂಲ ಲಕ್ಷಣ.

ಆಧುನಿಕೋತ್ತರ ಕನ್ನಡ ಸಾಹಿತ್ಯದಲ್ಲಿ ನಗರೀಕರಣ, ಜಾಗತೀಕರಣ, ಖಾಸಗೀಕರಣದ ಪರಿಣಾಮವಾಗಿ ಸ್ತ್ರೀವಾದಿ ಸಂವೇದನೆ ಸ್ಪಷ್ಟವಾಗಿ ಕಾಣಿಸುತ್ತದೆ. ಕಥೆ, ಕಾದಂಬರಿ, ಕವನ ಇತ್ಯಾದಿ ಸಾಹಿತ್ಯ ಪ್ರಕಾರಗಳಲ್ಲಿ ನಗರ ಮಧ್ಯಮ ವರ್ಗದ ಅಸ್ಥಿರ ಜೀವನ, ಉದ್ಯೋಗ, ಹಣ, ಹುದ್ದೆಗಳಿಗಾಗಿ ನಡೆಯುವ ಸ್ಪರ್ಧೆ, ಮಾನವ ಸಂಬಂಧಗಳ ವ್ಯಾಪಾರೀಕರಣ, ಕುಟುಂಬಗಳ ಬಾಂಧವ್ಯಗಳಲ್ಲಿ ಮಾರ್ಪಡುವ ಸ್ಥಿತಿ ಇವೆಲ್ಲವೂ ಸಾಹಿತ್ಯದ ವಿಷಯವಾಗಿವೆ. ಸಾಹಿತ್ಯ ಪ್ರಕಾರಗಳಲ್ಲಿ ವಿಶ್ಲೇಷಿಸುವ ಪಾತ್ರಗಳು ಮತ್ತು ಮನೋವೈಜ್ಞಾನಿಕ ಸಂಘರ್ಷ, ಆಧುನಿಕೋತ್ತರ ಕೃತಿಗಳ ಪಾತ್ರಗಳು ಆದರ್ಶವಾದಿಗಳಲ್ಲ, ಅವು ಗೊಂದಲಭರಿತ ಸ್ವಾರ್ಥಪರ ಅಸ್ಥಿರ ವ್ಯಕ್ತಿತ್ವಗಳಾಗಿರುತ್ತವೆ. ಸ್ತ್ರೀವಾದಿ ಸಂಸ್ಕೃತಿಯಲ್ಲಿ ಸಿಲುಕಿದ ವ್ಯಕ್ತಿ ಅನುಭವಿಸುವ ಒಂಟಿತನ, ಅರ್ಥಶೂನ್ಯತೆ ಸಾಹಿತ್ಯದಲ್ಲಿ ಸೂಕ್ಷ್ಮವಾಗಿ ಚಿತ್ರಿಸುತ್ತಾರೆ.

## KEYWORDS:

ಸ್ತ್ರೀವಾದಿ, ಆಧುನಿಕೋತ್ತರ, ಜಾಗೃತಿ, ಸಾಹಿತ್ಯ ಪ್ರಕಾರಗಳು, ಸಾಹಿತ್ಯ ವಿಭಾಗ ಕ್ರಮಗಳು, ಮನೋಭೂಮಿಕೆ, ವೈಚಾರಿಕ ಚಿಂತನೆಗಳು, ಸ್ತ್ರೀ ಸಂವೇದನೆ.

"ಆಧುನಿಕೋತ್ತರ ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದವನ್ನು ಕೇವಲ ಸ್ವೀಕರಿಸುವುದಷ್ಟೇ ಅಲ್ಲ ಅದರ ಅಪಾಯಗಳನ್ನು ಬಯಲುಗೊಳಿಸುವ ಧ್ವನಿಯೂ ಆಗಿರುತ್ತದೆ. ಮನುಷ್ಯನು ವಸ್ತುವಾಗಿ ಮಾರ್ಪಡುವ ಸ್ಥಿತಿ, ಸಂಸ್ಕೃತಿ ಸರಕಾಗುವ ಪ್ರಕ್ರಿಯೆ, ನೈತಿಕ ಮೌಲ್ಯಗಳ ಕುಸಿತ ಇವುಗಳ ಮೇಲೆ ನಿಂತಿರುವ ವಿಮರ್ಶೆ ಕಾಣಿಸುತ್ತದೆ. ಆಧುನಿಕೋತ್ತರ ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಸಂವೇದನೆ ಕಾಲದ ಅನಿವಾರ್ಯ ಫಲಿತಾಂಶವಾಗಿ ಮೂಡಿಬಂದಿದೆ."[1] ಬದುಕಿನ ವಾಸ್ತವವನ್ನು ಚಿತ್ರಿಸುತ್ತಿದ್ದರೂ ಮನುಷ್ಯತ್ವದ ಅಸ್ತಿತ್ವದ ಪ್ರಶ್ನೆಗಳನ್ನು ಎತ್ತುತ್ತದೆ. ಹೀಗಾಗಿ ಈ ಸಾಹಿತ್ಯ ಕೇವಲ ಕಥನವಾಗದೆ ಸಮಾಜದ ಆತ್ಮಪರಿಶೀಲನೆಯ ವೇದಿಕೆಯಾಗುತ್ತದೆ. ಇತ್ತೀಚೆಗೆ ಸಮಾಜ ಮತ್ತು ಸಾಹಿತ್ಯ ಕ್ಷೇತ್ರದಿಂದ ದಿವ್ಯ ನಿರ್ಲಕ್ಷ್ಯಕ್ಕೆ ಒಳಗಾದ ಮಹಿಳಾ ಸಾಹಿತ್ಯವನ್ನು ಮುತುವರ್ಜಿಯಿಂದ ಕೈಗೆತ್ತಿಕೊಂಡು ಜೋಡಿಸುವ ಕೆಲಸವಾಗುತ್ತದೆ. ಬಿ.ಎನ್. ಸುಮಿತ್ರಾದೇವಿ, ಎನ್. ಗಾಯತ್ರಿ, ನೇಮಿಚಂದ್ರ, ಸ್ತ್ರೀವಾದಿ ಚಿಂತಕಿಯರು ಅಪಾರ ಮುತುವರ್ಜಿ ಮತ್ತು ಶ್ರಮವಹಿಸಿದ್ದಾರೆ. ಇದರ ಫಲವಾಗಿ ಮಹಿಳಾ ಸಾಹಿತ್ಯ ಚರಿತ್ರೆಯನ್ನು ಮೂರು ಹಂತಗಳಲ್ಲಿ ಗುರುತಿಸಿಕೊಳ್ಳಬಹುದಾಗಿದೆ.

1. ಆಧುನಿಕ ಪೂರ್ವ 2. ಆಧುನಿಕ 3. ಆಧುನಿಕೋತ್ತರ

ಹೀಗೆ ಕನ್ನಡ ಸಾಹಿತ್ಯ ವಿಭಾಗಿಸಿಕೊಂಡು, ಮೊದಲ ಹಂತದಲ್ಲಿ ಬರುವ ವಚನಕಾರ್ತಿಯರು ಅಕ್ಕಮಹಾದೇವಿ, ಮುಕ್ತಾಯಕ್ಕ, ಅಮುಗೆ ರಾಯಮ್ಮ, ಆಯ್ದಕ್ಕಿ ಲಕ್ಕಮ್ಮ ಮುಂತಾದ ವಚನಕಾರ್ತಿಯರು; ಎರಡನೇ ಹಂತದಲ್ಲಿ ಬರುವ ಮಹಿಳಾ ಕೀರ್ತನಕಾರರು ಶೃಂಗಾರಮ್ಮ, ಹೆಳವನಕಟ್ಟೆ ಗಿರಿಯಮ್ಮ, ಸಂಚಿ ಹೊನ್ನಮ್ಮ, ಒಡೆಯರ ಆಸ್ಥಾನದ ಕವಯತ್ರಿಯರು, ಮಹಿಳಾ ತತ್ವಪದಕಾರರು ಇವರೆಲ್ಲ ಆಧುನಿಕ ಪೂರ್ವ ಮಹಿಳಾ ಸಾಹಿತಿಗಳಾಗಿ ಕಾಣಿಸುತ್ತಾರೆ. ಮೊದಲಾದವರು ಆಧುನಿಕ ಮಹಿಳಾ ಲೇಖಕಿಯರಾಗಿ ಗುರುತಿಸಿಕೊಂಡಿದ್ದಾರೆ. ಆಧುನಿಕೋತ್ತರ ಮಹಿಳಾ ಸಾಹಿತ್ಯ ಹೀಗೆ ಸಾಗಿ ಬಂದಿದೆ. ಇಲ್ಲಿ ಮುಖ್ಯವಾಗಿ ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಗುರುತಿಸಿಕೊಂಡ ಮಹಿಳೆಯರು ಪ್ರತಿರೋಧ ಮಹಿಳಾ ಸಾಹಿತ್ಯ ರಚಿಸಿದ್ದಾರೆ. ಇದೇ ಮುಂದೆ ಸ್ತ್ರೀವಾದಿ ಸಾಹಿತ್ಯ ಚಳುವಳಿಯ ರೂಪ ತಾಳಿತು. ರಾಜಲಕ್ಷ್ಮಿ ಎನ್. ರಾವ್, ವೀಣಾ ಶಾಂತೇಶ್ವರ, ಡಾ. ಅನುಪಮಾ ನಿರಂಜನ, ವಿಜಯಾ ದಬ್ಬೆ, ಹೆಚ್.ಎಲ್. ಪುಷ್ಪ, ಶೈಲಜಾ ಉಡಚಣ, ಶಶಿಕಲಾ ವಸ್ತ್ರದ, ಮಲ್ಲಿಕಾ ಘಂಟೆ, ಕೆ. ನೀಲಾ, ಡಾ. ಗೀತಾ ನಾಗಭೂಷಣ, ಸಾರಾ ಅಬೂಬಕ್ಕರ್, ಬಿ.ಟಿ. ಲಲಿತಾ ನಾಯಕ್, ವಿನಯಾ, ಸುಕನ್ಯಾ ಮಾರುತಿ ಇನ್ನೂ ಸಾಕಷ್ಟು ಮಹಿಳಾ ಸಾಹಿತಿಗಳು ಸ್ತ್ರೀವಾದಿ ಸಂವೇದನೆ ಬಗ್ಗೆ ಸುದೀರ್ಘವಾಗಿ ಕನ್ನಡ ಸಾಹಿತ್ಯದಲ್ಲಿ ಚರ್ಚೆಗೆ ಒಳಪಡಿಸಿದ್ದಾರೆ.

ಈ ಲೇಖನವು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಸ್ತ್ರೀವಾದಿ ಚಿಂತಕಿಯರ ಚಿಂತನೆಗಳನ್ನು ಅವಲೋಕಿಸುವ ಉದ್ದೇಶವನ್ನು ಹೊಂದಿದೆ. ಅಲ್ಲದೆ ಸ್ತ್ರೀ ವಿಚಾರಗಳು ಯಾವ್ಯಾವ ಕಾಲಘಟ್ಟಗಳಲ್ಲಿ ತನ್ನನ್ನು ಹೇಗೆ ಅಭಿವೃದ್ಧಿಪಡಿಸಿಕೊಂಡಿತು ಎಂಬುದರ ಚಾರಿತ್ರಿಕ, ಸಾಂಸ್ಕೃತಿಕ, ಸಾಮಾಜಿಕ ಕೆಲವು ಪ್ರಮುಖ ಅಂಶಗಳನ್ನು ಕನ್ನಡ ಸ್ತ್ರೀವಾದಿ ಕೃತಿಗಳ ಹಾಗೂ ಸ್ತ್ರೀವಾದಿ ಚಿಂತಕಿಯರ ಲೇಖನಗಳಲ್ಲಿ ವ್ಯಕ್ತವಾದ ವಿಚಾರಗಳ ಮೂಲಕ ಸಂಗ್ರಹಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಈ ಚೌಕಟ್ಟು ಸ್ತ್ರೀವಾದಿ ಚಿಂತನೆ ಕನ್ನಡ ಸಾಹಿತ್ಯದಲ್ಲಿ ಪಡೆದುಕೊಂಡ ಆಯಾಮಗಳನ್ನು ಗುರುತಿಸಲು ಬಹಳ ಮುಖ್ಯ ಆಕರವಾಗುತ್ತದೆ. ಹಾಗಾದರೆ ಕನ್ನಡ ಸ್ತ್ರೀವಾದಿ ಚಿಂತಕಿಯರ ಚಿಂತನೆಯನ್ನು ವಿವರವಾಗಿ ಈ ಲೇಖನದ ಮೂಲಕ ಚರ್ಚಿಸಲಾಗಿದೆ.

ತಿರುಮಲಾಂಬ 1887: ಆದಿ ಚಿಂತಕಿಯಾದ ತಿರುಮಲಾಂಬ ಪತ್ರಕರ್ತೆ ಮತ್ತು

ಪ್ರಕಾಶಕಿ ಹೌದು. 1916 ರಲ್ಲಿ ಮಹಿಳೆಯರಿಂದ ಮಹಿಳೆಯರಿಗಾಗಿ 'ಕರ್ನಾಟಕ ನಂದಿನಿ' ಪತ್ರಿಕೆಯನ್ನು ಜಾರಿಗೆ ತಂದರು. 1913ರಲ್ಲಿ 'ಸತಿ ಹಿತೈಷಿಣಿ' ಗ್ರಂಥಮಾಲೆಯನ್ನು ಪ್ರಕಟಿಸಿದರು. ಆನಂತರ ನಾಭಾ, ವಿದ್ಯುಲ್ಲತೆ, ಚಂದ್ರವದನ, ಪೂರ್ಣಕಲಾ ಮೊದಲಾದ ಗ್ರಂಥಗಳನ್ನು ಪ್ರಕಟಿಸಿದರು. ಇವರ ಸಾಹಿತ್ಯವನ್ನು ಗಮನಿಸಿದಾಗ ಕಂಡುಬರುವುದೇನೆಂದರೆ ಸಾಂಪ್ರದಾಯಿಕ ಸಮಾಜದ ಪ್ರತಿನಿಧಿಯಾಗಿ ಹೆಣ್ಣಿನ ಜೀವನ ಚಿತ್ರಣವನ್ನು ಮಾಡುತ್ತದೆ. ಅವಳಲ್ಲಿ ಇರಬೇಕಾದ ಆದರ್ಶ ಗುಣಗಳನ್ನು ಚಿತ್ರಿಸುತ್ತಲೇ ಸ್ತ್ರೀಯರಿಗೆ ಶಿಕ್ಷಣ ಎಷ್ಟು ಮುಖ್ಯವಾದದ್ದು ಎಂಬುದನ್ನು ಕೂಡ ಗುರುತಿಸಿ ಶಿಕ್ಷಣದಿಂದ ಮಾತ್ರ ಸ್ತ್ರೀಯರ ಉದ್ಧಾರ ಸಾಧ್ಯ ಎಂಬುದನ್ನು ಇವರು ಪ್ರತಿಪಾದಿಸುತ್ತಾರೆ. ಅಷ್ಟರಮಟ್ಟಿಗೆ ವೈಚಾರಿಕ ಚಿಂತನೆಯನ್ನು ಪ್ರದರ್ಶಿಸಿದರು, ವಿಧವಾ ವಿವಾಹ ವಿಚಾರದಲ್ಲಿ ಹಿಂಜರಿಯುತ್ತಾ ಸಾಂಪ್ರದಾಯಿಕತೆಯ ಮೊರೆ ಹೋಗುತ್ತಾರೆ.

ಆರ್. ಕಲ್ಯಾಣಮ್ಮ 1891: ತಿರುಮಲಾಂಬ ಅವರ ಸಮಕಾಲೀನರಾದ ಆರ್. ಕಲ್ಯಾಣಮ್ಮನವರು ಬಹುಮುಖಿ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡವರು. ಕಾದಂಬರಿ, ನಾಟಕ, ಮಕ್ಕಳಿಗಾಗಿ ಕೃತಿಗಳು, ಸಾಹಿತಿಕ ಪತ್ರಿಕೆ, ಮಹಿಳೆಯರಿಗಾಗಿ ಶ್ರೀ ಶಾರದಾ, ಸ್ತ್ರೀ ಸಮಾಜ ಸ್ಥಾಪನೆ, ಮೊದಲಾದ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಪ್ರಗತಿಪರವಾದ ವಿಚಾರವನ್ನು ನೀಡಿದರು. ಸರಸ್ವತಿ ಪತ್ರಿಕೆಯ ಉದ್ದೇಶವೇ ಭಾರತದ ಮಹಿಳೆಯರ ವಿಜಯಾಭ್ಯುದಯಗಳನ್ನು ಬೋಧಿಸತಕ್ಕ ಲೇಖನಗಳೆಂದೊಡಗೂಡಿದ ಸಾಹಿತ್ಯ ಪತ್ರಿಕೆಯನ್ನು ಹೊರತರುವುದಾಗಿತ್ತು. ಈ ಪತ್ರಿಕೆಯಲ್ಲಿ ಬರೆದ ವೈಚಾರಿಕ ಚಿಂತನೆಗಳಲ್ಲಿ ಸ್ತ್ರೀ ಶಿಕ್ಷಣವನ್ನು, ಆರ್ಥಿಕ ಸ್ವಾವಲಂಬನೆಯನ್ನು ಪಡೆಯಬೇಕೆಂಬ ವಿಷಯವಿದ್ದರೂ ಅವೆಲ್ಲವೂ ಅವರ ಸಾಂಸಾರಿಕ ಜೀವನಕ್ಕೆ ಅನುಕೂಲವಾಗುವಂತಿರಬೇಕೆಂಬ ಸಾಂಪ್ರದಾಯಿಕ ನೆಲೆಯನ್ನು ತಳೆಯುತ್ತಾರೆ. ಸ್ತ್ರೀಗೆ ಶಿಕ್ಷಣ ನೀಡದೆ ಹೋದಲ್ಲಿ ಸಮಾಜ ಹೇಗೆ ದುಷ್ಪರಿಣಾಮಗಳನ್ನು ಎದುರಿಸುತ್ತದೆ ಎಂಬುದನ್ನು ಅವರ 'ಸ್ತ್ರೀ ಶಿಕ್ಷಣ ಕ್ರಮ' ಲೇಖನ ತಿಳಿಸುತ್ತದೆ. ಅದರಲ್ಲಿ ಅವರ ಸೃಜನೇತರ ಬರವಣಿಗೆಯನ್ನು ಕಾಣಬಹುದು.

ತಿರುಮಲೆ ರಾಜಮ್ಮ 1900: ಇವರ 'ಸ್ತ್ರೀ ವಿದ್ಯಾಭ್ಯಾಸ' ಲೇಖನವು ವೈಚಾರಿಕ ಚಿಂತನೆಯ ಮನೋಭಾವದಿಂದ ಕೂಡಿದೆ. ವ್ಯಕ್ತಿ ಸ್ವಾತಂತ್ರ್ಯಕ್ಕೆ ಮಾನ್ಯತೆ, ಸಮಾನ ಅಧಿಕಾರಕ್ಕೆ ಬಲ ಬರುವುದಾದರೆ ಅದಕ್ಕೆ ಮೂಲ ಕಾರಣ ಸ್ತ್ರೀ ಶಿಕ್ಷಣ, ಸ್ತ್ರೀ ಕುಲ ಜಾಗೃತಿ ಎಂಬುದಾಗಲಿ, ಗೃಹ ಶಿಕ್ಷಣದ ಆಚೆಗೂ ಹೊರಗಿನ ಪ್ರಪಂಚದ ಜ್ಞಾನ, ಹೊರಗಿನ ವ್ಯವಹಾರ ಇದು ಸರ್ವರಿಗೂ ಅಗತ್ಯ. ಎಲ್ಲಾ ಕ್ಷೇತ್ರಗಳು ಸುಧಾರಣೆಯಾಗಬೇಕು. ವಿದ್ಯಾ ಸಾಮರ್ಥ್ಯ ಬಹುಮುಖ್ಯವಾಗಿ ಕರ್ತವ್ಯ ನಿರ್ವಹಿಸಿ ಸಮಾಜವನ್ನು ಕಟ್ಟಬೇಕು ಎಂಬ ಮಾತುಗಳು ರಾಜಮ್ಮನವರ ವಿಚಾರವಂತಿಕೆ, ಚಿಂತನೆಯ ನಿರ್ದೇಶನಗಳಾಗಿವೆ. ಸ್ತ್ರೀಯರಿಗೆ ವ್ಯಕ್ತಿತ್ವ ನಿರ್ಮಾಣ ಮುಖ್ಯ ಎನ್ನುತ್ತಾರೆ.

ಶ್ಯಾಮಲಾದೇವಿ ಬೆಳಗಾಂವಕರ್ 1910: ಉತ್ತರ ಕರ್ನಾಟಕದ ಮೊದಲ ತಲೆಮಾರಿನ ಬರಹಗಾರ್ತಿಯರಲ್ಲಿ ಪ್ರಮುಖರು ಶ್ಯಾಮಲಾದೇವಿಯವರು. ಇವರು 'ಭಾರತದಲ್ಲಿ ಸ್ತ್ರೀಯರ ಚಳುವಳಿ' ಎಂಬ ಲೇಖನದಲ್ಲಿ ಹೀಗೆ ಹೇಳುತ್ತಾರೆ: ಆಧುನಿಕ ಭಾರತೀಯ ಸ್ತ್ರೀಗೆ ಕಾವ್ಯಮಯ ಕಲ್ಪನಾ ರಮ್ಯ ಸ್ವರ್ಗವಾಗಲಿ, ದೇವತೆ ಎಂಬ ಆರಾಧನೆ ಸಂಬೋಧನೆ ಆಗಲಿ, ಜೀವನದ ವ್ಯವಹಾರಗಳಲ್ಲಿ ಮಾನ್ಯತೆಯ ಸ್ಥಾನ, ತನ್ನ ಭವಿಷ್ಯದ ನಿರ್ಧಾರ ಪಡುವ ಹಕ್ಕು ಇವು ಅವಳಿಗೆ ಬೇಕಾಗಿದೆ. ಸ್ತ್ರೀಯ ಬಗ್ಗೆ ಇವರ ಅಭಿಪ್ರಾಯಗಳು ಸಮತೋಲನ ವೃತ್ತಿಗೆ ಸಾಕ್ಷಿಯಾಗಿದೆ.

ಸರಸ್ವತಿ ಬಾಯಿ ರಾಜವಾಡೆಯವರು 1913: 'ಗಿರಿಬಾಲೆ' ಎಂಬ ಹೆಸರಿನಿಂದ

ಪ್ರಖ್ಯಾತರಾಗಿರುವ ಸರಸ್ವತಿ ಬಾಯಿ ರಾಜವಾಡೆ ಅವರು ಸ್ತ್ರೀಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು ಎನ್ನುತ್ತಾರೆ. ಮಹಿಳೆಯರಿಗೆ ಆರ್ಥಿಕ ಸೌಲಭ್ಯ ಸ್ವಯಮಾರ್ಜಿತ ಸಂಪಾದನೆಯಿಂದ ಆರ್ಥಿಕವಾಗಿ ಪ್ರಬಲರಾಗಬೇಕು ಎನ್ನುವ ಅಭಿಪ್ರಾಯವನ್ನು ಸರಸ್ವತಿಯವರು ವ್ಯಕ್ತಪಡಿಸುತ್ತಾರೆ. 1952 ರಲ್ಲಿ ಸುಪ್ರಭಾತ ಪತ್ರಿಕೆ ಪ್ರಾರಂಭಿಸಿದರು. ಇದು ಮಹಿಳಾ ಸಾಹಿತ್ಯದ ಪ್ರಗತಿಗಾಗಿ ಮೀಸಲಾದ ಪತ್ರಿಕೆ ಎಂಬ ಉದ್ದೇಶದಿಂದ ಹೊರಟಿತು. ಸ್ತ್ರೀಯ ಸ್ವಾತಂತ್ರ್ಯ, ವ್ಯಕ್ತಿತ್ವದ ಅಗತ್ಯ ಹೀಗೆ ಸ್ತ್ರೀಯ ಸಂವೇದನೆಗಳ ಬಗ್ಗೆ ಈ ಪತ್ರಿಕೆಯ ಮೂಲಕ ಲೇಖನಗಳನ್ನು ಪ್ರಕಟಿಸಿದರು.

ಶಾಂತದೇವಿ ಮಾಳವಾಡ: ಇವರು ಮಹಿಳೆಯರ 'ಆತ್ಮಶ್ರೀ', 'ಮಹಿಳೆಯರ ಚೇತನ', 'ಮಹಿಳೆಯರ ಅಲಂಕಾರ', 'ಸೊಬಗಿನ ಮನೆ' ಕೃತಿಗಳನ್ನು ರಚಿಸಿದ್ದಾರೆ. ಈ ಕೃತಿಗಳಲ್ಲಿ ಮಹಿಳೆಯರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ಆಧ್ಯಾತ್ಮಿಕ ವಿವೇಚನೆಗೆ ಗಮನ ಕೊಡುವ ಬಗ್ಗೆ ಮಹಿಳೆಯರಿಗೆ ತಿಳುವಳಿಕೆ ನೀಡುವ ಪ್ರಯತ್ನವಿದೆ.

ಡಾ. ಅನುಪಮಾ ನಿರಂಜನ: ಇವರು ತಮ್ಮ ವೈದ್ಯಕೀಯ ವೃತ್ತಿಯ ಅನುಭವ ಮತ್ತು ತಿಳುವಳಿಕೆಯನ್ನು ತಮ್ಮ ಕೃತಿಗಳ ಮೂಲಕ ಮಹಿಳಾ ಸಂವೇದನೆಯ ಒಳಗೊಂಡಿರುವ ಜೀವನಕ್ಕೆ ಬೇಕಾಗುವ ಹಲವಾರು ಸಂದೇಶಗಳನ್ನು ವ್ಯಕ್ತಪಡಿಸುವ ಲೇಖನಗಳನ್ನು ರಚಿಸಿದ್ದಾರೆ. 'ವಧುವಿಗೆ ಕಿವಿಮಾತು', 'ದಾಂಪತ್ಯ ದೀಪಿಕೆ', 'ಕೇಳು ಕಿಶೋರಿ', 'ತಾಯಿ ಮಗು', 'ಆರೋಗ್ಯ ದರ್ಶನ' ಇನ್ನೂ ಮೊದಲಾದ ಕೃತಿಗಳು ವೈದ್ಯಕೀಯ ವಿಚಾರಗಳೊಂದಿಗೆ ತಿಳುವಳಿಕೆಯನ್ನು ಮೂಡಿಸುವ ವೈಚಾರಿಕ ಕೃತಿಗಳಾಗಿವೆ. ಈ ಬಗೆಯ ಕೃತಿಗಳು ಅಂದಿನ ಕಾಲಕ್ಕೆ ಹೊಸ ಬಗೆಯದಾಗಿದ್ದವು.

ಹೆಚ್.ಎಸ್. ಶ್ರೀಮತಿ 1950: ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಎಚ್.ಎಸ್. ಶ್ರೀಮತಿ ಅವರು 'ಸ್ತ್ರೀವಾದಿ ಚಿಂತನೆ ಕೆಲವು ಪ್ರಶ್ನೆಗಳು ಸಂದೇಹಗಳು' (1999), 'ಸ್ತ್ರೀವಾದ' (2003) ಈ ಕೃತಿಗಳ ಮೂಲಕ ಸ್ತ್ರೀವಾದ ಸಂವೇದನೆಯನ್ನು ವ್ಯಕ್ತಪಡಿಸಿದ್ದಾರೆ.

ಪ್ರಭಾವತಿ ಎಸ್.ವಿ. 1950: ಪ್ರಭಾವತಿಯವರು ಸ್ತ್ರೀವಾದ ಕುರಿತಂತೆ ಚಿಂತನೆ ಮಾಡಿದ 'ಸ್ತ್ರೀವಾದದ ಪ್ರಸ್ತುತ' ಎಂಬುದು ವಿಮರ್ಶಾ ಕೃತಿಯಾಗಿದೆ. ಅನೇಕ ಪತ್ರಿಕೆಗಳಲ್ಲಿ ಪ್ರಕಟಗೊಂಡಿರುವ ಇವರ ಲೇಖನಗಳು ಸ್ತ್ರೀವಾದ ದೃಷ್ಟಿಕೋನದಿಂದ ರಚನೆ ಮಾಡುವುದು, ಸ್ತ್ರೀವಾದಿ ಅರಿವಿನೊಂದಿಗೆ ಪುರಾಣದ ಸ್ತ್ರೀ ಪಾತ್ರಗಳನ್ನು ಸಮಕಾಲೀನವಾಗಿ ನೋಡುವ ವಿಶಿಷ್ಟ ಪ್ರಯತ್ನವನ್ನು ದ್ರೌಪದಿ, ಕುಂತಿ, ಅಹಲ್ಯೆ, ಯಶೋದರೆ, ಶಕುಂತಲೆ, ಸೀತೆ ಮುಂತಾದ ಪಾತ್ರಗಳಲ್ಲಿ ವ್ಯಕ್ತಪಡಿಸಿದ್ದಾರೆ.

ಬಿ. ಎನ್. ಸುಮಿತ್ರಾ ಬಾಯಿ 1950: 'ಸ್ತ್ರೀವಾದಿ ಪ್ರವೇಶಿಕೆ' (1995) ಪಾಶ್ಚಾತ್ಯ ಚಿಂತಕಿಯರನ್ನು, ಸ್ತ್ರೀವಾದಿ ಪಂಥಗಳನ್ನು, ಸ್ತ್ರೀವಾದ ಇತರ ಜ್ಞಾನ ಶಿಸ್ತುಗಳೊಂದಿಗೆ ಸಂಬಂಧವನ್ನು ಕನ್ನಡಿಗರಿಗೆ ಪರಿಚಯಿಸುವ ಕೆಲಸವನ್ನು ಮಾಡಿದ್ದಾರೆ. "ಸ್ತ್ರೀವಾದ ಪಶ್ಚಿಮದ ಸ್ತ್ರೀವಾದಿ ವಿಮರ್ಶಾ ಪಂಥಗಳು (2000) ಈ ಕೃತಿಗಳು ಸ್ತ್ರೀವಾದ ಸಂವೇದನೆಯನ್ನು ಪರಿಚಯಿಸುತ್ತವೆ. ಕನ್ನಡದಲ್ಲಿ ಸ್ತ್ರೀವಾದಿ ವಿಮರ್ಶೆಯನ್ನು ಬೆಳೆಸುವಲ್ಲಿ ಇವರ ಪಾತ್ರ ಹಿರಿದು".[2]

ವಿಜಯಾ ದಬ್ಬೆ 1951: ಶ್ಯಾಮಲಾ ಸಂಚಯ (1989), ಹಿತೈಷಿಣಿ ಹೆಜ್ಜೆಗಳು (1992), ಸಾರ ಸರಸ್ವತ ಈ ಸಾಹಿತ್ಯ ವಾಚಿಕೆಗಳ ಮೂಲಕ ಸ್ತ್ರೀವಾದ ಚಿಂತಕಿಯರ ನೆಲೆ ಬೆಲೆಗಳನ್ನು

ಗುರುತಿಸಿಕೊಳ್ಳಲು ಸಹಾಯ ಮಾಡಿದರು. ವಚನಕಾರ್ತಿಯರ ವಚನಗಳನ್ನು ಸ್ತ್ರೀವಾದಿ ವಿಮರ್ಶೆ ಹಿನ್ನೆಲೆಯಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದಾರೆ. 'ಮಹಿಳಾ ಸಾಹಿತ್ಯ ಸಮಾಜ', 'ನಾರಿ ದಾರಿ ದಿಗಂತ' ಈ ಕೃತಿಗಳಲ್ಲಿ ಸ್ತ್ರೀ ಸಂವೇದನೆಯ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ್ದಾರೆ.

ಗಾಯತ್ರಿ ನಾವಡ 1954: ಇವರ ಪಿ.ಎಚ್.ಡಿ ಮಹಾಪ್ರಬಂಧ 'ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು'. 'ಸ್ತ್ರೀವಾದ ಒಂದು ಸಂಕಥನ' ಸಂಶೋಧನಾ ಗ್ರಂಥದಲ್ಲಿ, ಜನಪದ ಸಾಹಿತ್ಯದಲ್ಲಿ ಒಲವುಳ್ಳ ಇವರು ಭಾರತೀಯ ಸ್ತ್ರೀವಾದ ಮೂಲ ನೆಲೆಗಳು ಜನಪದ ಸಾಹಿತ್ಯದಲ್ಲಿರುವುದನ್ನು ಕುರಿತು ಹೇಳುತ್ತಾರೆ. ಈ ಸಂಕೀರ್ಣತೆಯಲ್ಲಿ ಹೆಣ್ಣಿನ ಹೊಸ ಚರಿತ್ರೆ ಕಟ್ಟುವುದು ಭಾರತೀಯ ಸ್ತ್ರೀವಾದ ರೂಪಗೊಳ್ಳಬೇಕಾದ ತಾತ್ವಿಕ ನೆಲೆ ಎನ್ನುತ್ತಾರೆ.

ಮಲ್ಲಿಕಾ ಘಂಟಿ 1959: ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಕುಲಪತಿಯಾಗಿ, ಗುಲ್ಬರ್ಗ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸುವುದರ ಮೂಲಕ ಸೃಜನಶೀಲ ಕೃತಿಗಳು, ಸಂಶೋಧನೆ, ಹೋರಾಟಗಳ ಮೂಲಕ ಸ್ತ್ರೀವಾದಿ ಚಿಂತನೆಯನ್ನು ಬೆಳೆಸಿದವರು. ದಲಿತ ಪರ ಧ್ವನಿಯಾಗಿ ಸೇವೆ ಸಲ್ಲಿಸಿದವರು. ಮಹಿಳಾಪರ ಗಟ್ಟಿ ನಿಲುವುಗಳನ್ನು ತಮ್ಮ ಬರಹ, ಭಾಷಣ, ಹೋರಾಟಗಳ ಮೂಲಕ ವ್ಯಕ್ತಪಡಿಸಿದ್ದಾರೆ. 'ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ 1990' ಇವರ ಸಂಶೋಧನಾ ಪ್ರಬಂಧ, ಮಹಿಳಾ ಕಥಾ ಸಾಹಿತ್ಯವನ್ನು ಗುರುತಿಸುವಲ್ಲಿ ಅವರ ಸ್ತ್ರೀಪರ ದೃಷ್ಟಿಕೋನ ಕೆಲಸ ಮಾಡಿದೆ. 'ಧರಣಿಯ ಮೇಲೊಂದು' ವಿಮರ್ಶಾ ಸಂಕಲನ, 'ತನು ಕರಗದವರಲ್ಲಿ' ಕೃತಿಯು ವಚನ ಚಳುವಳಿಯ ಸಂದರ್ಭ ಮತ್ತು ಸಮಕಾಲೀನ ಸಂದರ್ಭದಲ್ಲಿ ಇರುವ ಅಸಮಾನತೆಯನ್ನು ಕುರಿತು ಚರ್ಚಿಸುತ್ತಾರೆ.

ಸಬಿಹಾ ಭೂಮಿಗೌಡ 1959: ಮಂಗಳೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಸಬಿಹಾ ಅವರು ಸ್ತ್ರೀವಾದಿ ಚಿಂತನೆ ಬರಹಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು. 'ನಿಲುಮೆ' ಕೃತಿಯು ಮೂರು ಭಾಗಗಳನ್ನು ಹೊಂದಿದ್ದು, ಭಾಗ ಒಂದರಲ್ಲಿ ಮಹಿಳಾ ಚಿಂತನೆ, ಭಾಗ ಎರಡರಲ್ಲಿ ಮಹಿಳಾ ಬರಹಗಾರ್ತಿಯರ ಬರಹ ಮತ್ತು ಭಾಗ ಮೂರರಲ್ಲಿ ಸಾಹಿತ್ಯ ವಿಮರ್ಶೆಯನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ವಿಶ್ಲೇಷಣೆ ಮಾಡಿದ್ದಾರೆ. ಕನ್ನಡ ಸಾಹಿತ್ಯ ಮತ್ತು ಮಹಿಳಾ ಮಕ್ಕಳ ಆತ್ಮಕಥೆಗಳು ಮತ್ತು ಮಹಿಳಾ ಅನಾವರಣಕ್ಕೆ ಸಂಬಂಧಿಸಿದ ಅನೇಕ ಕೃತಿಗಳ ಸಂಪಾದನೆಯಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಸ್ತ್ರೀವಾದಿ ಚಿಂತನೆಯ ಹಿನ್ನೆಲೆಯಲ್ಲಿ ಮಹಿಳಾ ಸಮಸ್ಯೆಗಳನ್ನು ಕುರಿತ ಪ್ರಕರಣಗಳನ್ನು ದಾಖಲಿಸುವ ಮಹತ್ವದ ಕೆಲಸ ಮಾಡಿದ್ದಾರೆ. 'ಕೋಮುವಾದ ಮತ್ತು ಮಹಿಳೆ' ಎಂಬ ಲೇಖನದಲ್ಲಿ ಸ್ತ್ರೀವಾದ ಸಂವೇದನೆಯ ಬಗ್ಗೆ ಚರ್ಚಿಸಿದ್ದಾರೆ. ಹೀಗೆ "ಸ್ತ್ರೀವಾದಿ ತಾತ್ವಿಕತೆಯ ಲಿಂಗ ನ್ಯಾಯದ ವೈಜ್ಞಾನಿಕ ಒಳನೋಟಗಳಿಂದ ಮಹಿಳಾ ಅಸ್ತಿತ್ವ ಮತ್ತು ಅನನ್ಯತೆಯ ಶೋಧವಾಗುತ್ತಿರುವುದು ಮಹಿಳಾ ಪ್ರಜ್ಞೆಯ ವಿಕಾಸದ ಲಕ್ಷಣವೂ ಹೌದು".[3] ಮಹಿಳಾಪರ ಚಿಂತಕಿಯರಿಂದ ಸ್ತ್ರೀ ಸಂವೇದನೆಗೊಂದು ಶಕ್ತಿ ಬಂದಿತು. ಕನ್ನಡ ಸಾಹಿತ್ಯದ ಪ್ರಕಾರಗಳಲ್ಲಿ ಆಧುನಿಕೋತ್ತರ ಸ್ತ್ರೀವಾದ ಸಂವೇದನೆಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದೆ.

ಎನ್. ಗಾಯತ್ರಿ: 'ಅಚಲ' ಎಂಬ ಸ್ತ್ರೀವಾದಿ ಪತ್ರಿಕೆಯ ಸಂಪಾದಕರಾಗಿ ಮಹಿಳಾ ವಾದವನ್ನು ಬೆಳೆಸಿದರು ಎಂದು ಗಾಯತ್ರಿ ಅವರು ಮಹಿಳಾ ವಿಚಾರ ಸಾಹಿತ್ಯದಲ್ಲಿ ದಾಖಲಿಸಬೇಕಾದ ಹೆಸರಾಗಿದೆ. 'ಮಹಿಳೆ ಬಿಡುಗಡೆ ಹಾದಿಯಲ್ಲಿ' ಸ್ತ್ರೀವಾದ ಸಂವೇದನೆ ನಿಲುವುಗಳ ಬಗ್ಗೆ ಸುದೀರ್ಘವಾಗಿ ಕೃತಿಯಲ್ಲಿ ಚರ್ಚಿಸಿದ್ದಾರೆ.

ಸಾರಾ ಅಬೂಬಕ್ಕರ್: "ಚಂದ್ರಗಿರಿಯ ತೀರದಲ್ಲಿ" ಕಾದಂಬರಿಯ ಮೂಲಕ ಸಾಹಿತ್ಯ ಲೋಕದಲ್ಲಿ ಚಿರಪರಿಚಿತರಾಗಿರುವ ಇವರು ವೈಜ್ಞಾನಿಕ ಯುಗದಲ್ಲಿ ಮಹಿಳಾ ಶಿಕ್ಷಣದ ಆದ್ಯತೆಯ ಬಗ್ಗೆ ವ್ಯಕ್ತಪಡಿಸಿದ್ದಾರೆ.

ಕೆ. ಷರೀಫಾ: ಇವರು ಕವಯತ್ರಿಯಾಗಿ, ವಿಚಾರವಾದಿ ಲೇಖಕಿಯಾಗಿ ಪರಿಚಿತರು. "ಬಂಡಾಯ ಮುಸ್ಲಿಂ ಸಂವೇದನೆ" ಕೃತಿಯಲ್ಲಿ ಷರೀಫಾ ಅವರು ಹೊಸ ಸಾಮಾಜಿಕ ಪರಿಸರದಲ್ಲಿ ಮುಸ್ಲಿಂ ಮಹಿಳೆಯ ಪಾತ್ರವನ್ನು ವಿಶ್ಲೇಷಿಸುತ್ತಾರೆ. ಜಾಗತೀಕರಣದ ಸಂದರ್ಭದಲ್ಲಿ ಮಹಿಳೆಯರ ಪ್ರಾತಿನಿಧಿಕರಣವನ್ನು ಕುರಿತು ಅವರು ಮಾಡಿದ ಅಧ್ಯಯನವನ್ನು ಇಲ್ಲಿ ಹೆಸರಿಸಬಹುದಾಗಿದೆ. ಮಹಿಳೆ ಮತ್ತು ಶೋಷಣೆಯ ಬಗ್ಗೆ ತಮ್ಮ ಚಿಂತನೆಗಳನ್ನು ಹಲವಾರು ಲೇಖನಗಳ ಮೂಲಕ ಪ್ರಕಟಿಸಿದ್ದಾರೆ.

ಸರಸ್ವತಿ ಬಾಯಿ ರಾಜವಾಡೆಯವರು 1913: 'ಗಿರಿಬಾಲೆ' ಎಂಬ ಹೆಸರಿನಿಂದ ಪ್ರಖ್ಯಾತರಾದ ಸರಸ್ವತಿ ಬಾಯಿ ರಾಜವಾಡೆ ಅವರು ಸ್ತ್ರೀ ಆರ್ಥಿಕವಾಗಿ ಸಬಲರಾಗಬೇಕೆನ್ನುತ್ತಾರೆ. ಮಹಿಳೆಯ ಆರ್ಥಿಕ ಸೌಲಭ್ಯ ಸ್ವಯಮಾರ್ಜಿತ ಸಂಪಾದನೆಯಿಂದ ಬೇಕು ಎನ್ನುವ ಅಭಿಪ್ರಾಯವನ್ನು ಸರಸ್ವತಿಯವರು ವ್ಯಕ್ತಪಡಿಸುತ್ತಾರೆ. 1952 ರಲ್ಲಿ ಸುಪ್ರಭಾತ ಪತ್ರಿಕೆ ಪ್ರಾರಂಭಿಸಿದರು. ಇದು ಮಹಿಳಾ ಸಾಹಿತ್ಯದ ಪ್ರಗತಿಗಾಗಿ ಮೀಸಲಾದ ಪತ್ರಿಕೆ ಎಂಬ ಉದ್ದೇಶದಿಂದ ಹೊರಟಿತು. ಅಂದು ಸ್ತ್ರೀಯ ಸ್ವಾತಂತ್ರ್ಯ, ವ್ಯಕ್ತಿತ್ವದ ಅಗತ್ಯ, ಬಾಲ್ಯವಿವಾಹ, ವಿಧವಾ ಕೇಶಮುಂಡನ ಇಂತಹ ವಿಷಯಗಳ ಬಗ್ಗೆ ಸ್ತ್ರೀಯರ ನಿಲುವು "ಸುಪ್ರಭಾತ" ಪತ್ರಿಕೆಯಲ್ಲಿ ವ್ಯಕ್ತಪಡಿಸುತ್ತಾರೆ. ಈ ವಿಚಾರಗಳು ಅಂದಿಗೆ ಕ್ರಾಂತಿಕಾರಿ ವಿಚಾರಗಳಾಗಿದ್ದವು. ಸಮಾನ ಕೆಲಸಕ್ಕೆ ಸಮಾನ ವೇತನ, ಜೀವನದ ವಿವಿಧ ಕ್ಷೇತ್ರಗಳಲ್ಲಿ ಅವಕಾಶ ಕಲ್ಪಿಸುವ ಮುಂತಾದ ವಿಚಾರ ಚಿಂತನೆಗಳ ಕುರಿತಂತೆ ಸರಸ್ವತಿ ಅವರ ಲೇಖನಗಳು ವೈಚಾರಿಕ ಚಿಂತನೆಗೆ ಸಾಕ್ಷಿಯಾಗಿದೆ.

**ಉಪಸಂಹಾರ:** ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಸ್ತ್ರೀವಾದಿ ಸಂವೇದನೆಯ ಬಗ್ಗೆ ಕನ್ನಡದ ಅನೇಕ ಚಿಂತಕಿಯರು ಸ್ತ್ರೀವಾದಿ ಚಿಂತನೆ ಒಂದು ಸಮಷ್ಟಿ ಪ್ರಜ್ಞೆಯಾಗಿ ಬೆಳೆಸುವಲ್ಲಿ ಕನ್ನಡ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಸ್ತ್ರೀವಾದಿ ವಿಚಾರ ಸಾಹಿತ್ಯ ಅನೇಕ ಕವಲುಗಳಲ್ಲಿ ತನ್ನನ್ನು ಇಂದು ಅಭಿವ್ಯಕ್ತಿಸಿಕೊಂಡಿದೆ. ಪ್ರಸ್ತುತ ಲೇಖನ ಸ್ತ್ರೀವಾದಿ ಚಿಂತನೆಯ ಅಥವಾ ಸಂವೇದನೆ ವಿಚಾರಗಳನ್ನು ಸಾಹಿತ್ಯವಾಗಿ ಪ್ರಕಟಗೊಂಡ ನೆಲೆಯಲ್ಲಿ ಮಾತ್ರ ಗಮನಿಸಿದೆ. ಕನ್ನಡ ಸಾಹಿತ್ಯದ ಪ್ರಕಾರಗಳಾದ ಕಾವ್ಯ, ಕಥೆ, ಕಾದಂಬರಿ, ಲೇಖನ, ವಿಮರ್ಶೆ, ಸಂಶೋಧನೆ ಇತ್ಯಾದಿ ಸಾಹಿತ್ಯ ಪ್ರಕಾರಗಳ ಮೂಲಕ ಇಂದು ಮುಖ್ಯ ತಾತ್ವಿಕ ಚಿಂತನೆಯಾಗಿದೆ. "ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದ ನೆಲೆಗಳು ಸನಾತನ ಸಾಹಿತ್ಯದ ಪುನರ್ಮೌಲ್ಯೀಕರಣ, ಸ್ತ್ರೀ ಕುಲದ ಸಮಸ್ಯೆಗಳ ಚಿತ್ರಣ, ಸ್ತ್ರೀಯರ ನೋವು ನಲಿವುಗಳಿಗೆ ಕನ್ನಡಿ, ಸ್ತ್ರೀ ವಿರೋಧಿ ಖಂಡನೀಯ ನಿಲುವುಗಳು, ಸಾಮಾಜಿಕ ಪಿಡುಗುಗಳ ಅನಾವರಣ, ಸ್ತ್ರೀವಾದ ಮೂಲಕ ಮಹಿಳಾ ಚಳುವಳಿಗೆ ಚಾಲನೆ, ಮಹಿಳಾ ಸಾಹಿತ್ಯವು ಸತ್ಯದ ನಿಷ್ಠುರ ಪ್ರತಿನಿಧಿ, ಮಹಿಳಾ ಸಾಹಿತ್ಯವು ನಾರಿ ಮನೋಭೂಮಿಕೆ ಸ್ವಗತ"[4] ಇವುಗಳ ಬಗ್ಗೆ ಈ ಲೇಖನದಲ್ಲಿ ಮಹಿಳಾ ಚಿಂತಕಿಯರ ಬರಹಗಳಲ್ಲಿ ಸೂಕ್ಷ್ಮವಾಗಿ ವಿಮರ್ಶಿಸಿ, ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದ ಸಂವೇದನೆಗೆ ಸ್ವಾತಂತ್ರ್ಯವನ್ನು ಕಲ್ಪಿಸಿಕೊಟ್ಟಿದ್ದಾರೆ. ಈ ಲೇಖನದ ಮೂಲಕ ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಸ್ತ್ರೀವಾದಿ ಸಂವೇದನೆಯ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಗಿದೆ.

**ಕೊನೆ ಟಿಪ್ಪಣಿಗಳು:**

1. ಶಿವಾನಂದ ಕೆಳಗಿನಮನಿ, (2000), ಗೋಪಾಲಕೃಷ್ಣ ಅಡಿಗರ ನವ್ಯ ಕಾವ್ಯ: ಒಂದು ಅಧ್ಯಯನ, ಧಾರವಾಡ: ಸೌಜನ್ಯ ಪ್ರಕಾಶನ, ಪು.ಸಂ. 52
2. ಚಂದ್ರಕಾಂತ ವಿ. ಚೌವ್ಹಾಣ್, (2004), ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬಂಡಾಯ, ಬೆಂಗಳೂರು: ದಾಮಿನಿ ಮುದ್ರಣಾಲಯ, ಪು.ಸಂ. 111
3. ಕೊಕ್ಕನವರ ವೈ. ವೈ., (2024), ಶಾಸ್ತ್ರಸಾರ ಸೌರಭ, ರಬಕವಿ: ಸೃಜನ ಸಾಹಿತ್ಯ ಪ್ರಕಾಶನ ಪು.ಸಂ. 293
4. ಕೊಕ್ಕನವರ ವೈ. ವೈ., (2025), ಹೊಸಗನ್ನಡ ಸಾಹಿತ್ಯ ಪ್ರವೇಶಿಕೆ, ರಬಕವಿ: ಸೃಜನ ಸಾಹಿತ್ಯ ಪ್ರಕಾಶನ, ಪು.ಸಂ. 192

**ಪರಾಮರ್ಶನ ಗ್ರಂಥಗಳು:**


1. ಶಿವಾನಂದ ಕೆಳಗಿನಮನಿ, (2000), ಗೋಪಾಲಕೃಷ್ಣ ಅಡಿಗರ ನವ್ಯ ಕಾವ್ಯ: ಒಂದು ಅಧ್ಯಯನ, ಧಾರವಾಡ: ಸೌಜನ್ಯ ಪ್ರಕಾಶನ.
2. ಚಂದ್ರಕಾಂತ ವಿ. ಚೌವ್ಹಾಣ್, (2004), ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬಂಡಾಯ, ಬೆಂಗಳೂರು: ದಾಮಿನಿ ಮುದ್ರಣಾಲಯ.
3. ಕೊಕ್ಕನವರ ವೈ. ವೈ., (2024), ಶಾಸ್ತ್ರಸಾರ ಸೌರಭ, ರಬಕವಿ: ಸೃಜನ ಸಾಹಿತ್ಯ ಪ್ರಕಾಶನ.
4. ಕೊಕ್ಕನವರ ವೈ. ವೈ., (2025), ಹೊಸಗನ್ನಡ ಸಾಹಿತ್ಯ ಪ್ರವೇಶಿಕೆ, ರಬಕವಿ: ಸೃಜನ ಸಾಹಿತ್ಯ ಪ್ರಕಾಶನ.
5. ಕೊಕ್ಕನವರ ವೈ. ವೈ., (2021), ಸಂಶೋಧನಾ ಸಿರಿಗನ್ನಡಿ, ರಬಕವಿ: ಸೃಜನ ಸಾಹಿತ್ಯ ಪ್ರಕಾಶನ.
6. ಶ್ರೀಮತಿ ಎಚ್. ಎಸ್., (1995), ಆಧುನಿಕ ಭಾರತದಲ್ಲಿ ಮಹಿಳೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
7. ಶ್ರೀಮತಿ ಎಚ್. ಎಸ್. (ಸಂ), (2006), ಮಹಿಳಾ ಸಾಹಿತ್ಯ ಚರಿತ್ರೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
8. ಗಾಯತ್ರಿ ಎನ್., (2003), ಮಹಿಳೆ: ಬಿಡುಗಡೆಯ ಹಾದಿಯಲ್ಲಿ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
9. ತಾರಿಣಿ ಶುಭದಾಯಿನಿ ಆರ್., (2018), ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.